FEBRUARY 24, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ದೇಶದ ಜೈವಿಕ ತಂತ್ರಜ್ಞಾನ ಆರ್ಥಿಕತೆಗೆ** ರಾಜ್ಯದ ಶೇಕಡ 21 ರಷ್ಟು ಕೊಡುಗೆ; ಕರ್ನಾಟಕ ಜೈವಿಕ ಆರ್ಥಿಕತೆ ವರದಿ.

**ಮಿಶನ್ ಪ್ರಕೃತಿ; ರಾಜ್ಯದ** 10 ಶಾಲೆಗಳಿಗೆ 'ಅತ್ಯುತ್ತಮ ಶಾಲೆ' ಪರಿಸರ ಸಂರಕ್ಷಣೆ ಪ್ರಶಸ್ತಿ

**ಇಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ** 34 ನೇ ಘಟಿಕೋತ್ಸವ: ಮೂವರು ಗಣ್ಯರಿಗೆ ನಾಡೋಜಾ ಪ್ರಶಸ್ತಿಯ ಗೌರವ

**ರಣಜಿ ಟ್ರೋಫಿ ಕ್ರಿಕೆಟ್ : ಇಂದಿನಿಂದ** ಹುಬ್ಬಳ್ಳಿಯ ಕೆ.ಎಸ್.ಸಿ.ಎ ಮೈದಾನದಲ್ಲಿ, ಕರ್ನಾಟಕ ಹಾಗೂ ಜಮ್ಮು–ಕಾಶ್ಮೀರ ತಂಡಗಳ ನಡುವೆ ಅಂತಿಮ ಪಂದ್ಯ.

<><><>

**ಈಗ ವಾರ್ತೆಗಳ ವಿವರ**

<><><>

**ಕರ್ನಾಟಕದ ಜೈವಿಕ ಆರ್ಥಿಕತೆಯು,** 2025 ರಲ್ಲಿ, 3 ಲಕ್ಷದ 53 ಸಾವಿರ ಕೋಟಿ ರೂಪಾಯಿ ತಲುಪಿದೆ. ರಾಜ್ಯವು, ಭಾರತದ ಜೈವಿಕ ಆರ್ಥಿಕತೆಗೆ ಶೇಕಡ 21 ರಷ್ಟು ಹಾಗೂ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ – ಜಿ.ಎಸ್.ಡಿಪಿ ಗೆ ಶೇಕಡ 10 ಕ್ಕಿಂತ ಹೆಚ್ಚು ಕೊಡುಗೆ ನೀಡುತ್ತಿದೆ ಎಂದು ರಾಜ್ಯ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ ಖರ್ಗೆ ಹೇಳಿದರು. ಬೆಂಗಳೂರಿನಲ್ಲಿ ಕರ್ನಾಟಕ ಜೈವಿಕ ಆರ್ಥಿಕತೆ ವರದಿ–2025 ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಜೈವಿಕ ತಂತ್ರಜ್ಞಾನ ವಲಯವು ಪ್ರತಿ ತ್ರೈಮಾಸಿಕದಲ್ಲಿ ಸುಮಾರು 90 ಸಾವಿರ ಕೋಟಿ ರೂಪಾಯಿಗಳನ್ನು ರಾಜ್ಯದ ಆರ್ಥಿಕತೆಗೆ ಸೇರಿಸುತ್ತಿದೆ. 2025 ರಲ್ಲಿ 218 ಹೊಸ ಬಯೋಟೆಕ್ ಸ್ಟಾರ್ಟ್‌ಅಪ್‌ಗಳು ಆರಂಭಗೊಂಡಿದ್ದು, ಪ್ರಸ್ತುತ ನವೋದ್ಯಮಗಳ ಸಂಖ್ಯೆ ಒಟ್ಟು ಸಾವಿರದ 451 ಕ್ಕೆ ತಲುಪಿದೆ ಎಂದರು. ದಕ್ಷಿಣ ಕನ್ನಡ, ಉತ್ತರ ಕರ್ನಾಟಕದ ಬೆಳಗಾವಿ ಸೇರಿದಂತೆ, ಬೆಂಗಳೂರಿನಾಚೆ ಜೈವಿಕ ತಂತ್ರಜ್ಞಾನದ ಬೆಳವಣಿಗೆ ಹಾಗೂ ಕಾರ್ಯ ಚಟುವಟಿಕೆಗಳು ವೇಗವಾಗಿ ವರ್ಧಿಸುತ್ತಿವೆ ಎಂದರು.

<><><>

**ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ವರ್ಲ್ಡ್** ವೈಡ್ ಫಂಡ್ ಫಾರ್ ನೇಚರ್–ಡಬ್ಲ್ಯೂ.ಡಬ್ಲ್ಯೂ.ಎಫ್ ಇಂಡಿಯಾ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಮಿಷನ್ ಪ್ರಕೃತಿ: ತರಗತಿಯಿಂದ ಸಂರಕ್ಷಣೆಯತ್ತ' ಕಾರ್ಯಕ್ರಮದಡಿ, ಪ್ರಕೃತಿ ಹಾಗೂ ಶಾಲಾ ಪರಿಸರ ಸಂರಕ್ಷಣೆಯಲ್ಲಿ ವಿಶೇಷ ಸಾಧನೆ ತೋರಿದ ರಾಜ್ಯದ ಹತ್ತು ಶಾಲೆಗಳಿಗೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಖಾತೆ ಸಚಿವ ಮಧು ಬಂಗಾರಪ್ಪ ಅವರು, ಬೆಂಗಳೂರು, ವಿಕಾಸಸೌಧದಲ್ಲಿ ಜರುಗಿದ ಸಮಾರಂಭದಲ್ಲಿ 'ಅತ್ಯುತ್ತಮ ಶಾಲೆ' ಪ್ರಶಸ್ತಿ ಪ್ರದಾನ ಮಾಡಿದರು. ಉತ್ತರ ಕರ್ನಾಟಕದ ಮೂರು ಶಾಲೆಗಳಾದ ಬಳ್ಳಾರಿ ಜಿಲ್ಲೆ, ಎಮ್ಮಿಗನೂರು ಜಿ.ಎಂ.ಪಿ.ಎಚ್.ಎಸ್, ಬೆಳಗಾವಿ ಜಿಲ್ಲೆ ಕಾಗವಾಡ ತಾಲೂಕು, ಕಾತ್ರಾಳದ ಜಿ.ಕೆ.ಎಚ್.ಪಿ.ಎಸ್, ಧಾರವಾಡ ಜಿಲ್ಲೆ, ಕಲಘಟಗಿ ತಾಲೂಕು, ಜೋಡಳ್ಳಿಯ ಜಿ.ಎಚ್.ಪಿ.ಎಸ್ ಸೇರಿದಂತೆ ಒಟ್ಟು 8 ಜಿಲ್ಲೆಗಳ ಹತ್ತು ಶಾಲೆಗಳಿಗೆ ಈ ಪ್ರಶಸ್ತಿ ಸಂದಿದೆ. ಮುಂದಿನ ವರ್ಷದಿಂದ, 1 ರಿಂದ 10ನೇ ತರಗತಿಯವರೆಗೆ 'ನೈತಿಕ ವಿಜ್ಞಾನ' ಪಠ್ಯಪುಸ್ತಕವನ್ನು ಪರಿಚಯಿಸಲಾಗುವುದು. ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಶಿಕ್ಷಣದ ಆದ್ಯತೆಯಾಗಿದೆ ಎಂದು ಸಚಿವರು ಹೇಳಿದರು.

<><><>

**ರಾಜ್ಯದ ಶಾಲೆಗಳಲ್ಲಿ 16 ವರ್ಷದೊಳಗಿನ** ವಿದ್ಯಾರ್ಥಿಗಳಿಗೆ, ಮೊಬೈಲ್ ಫೋನ್ ಬಳಕೆಯನ್ನು ನಿಷೇಧಿಸುವ ಕುರಿತು, ಸರ್ಕಾರ ಗಂಭೀರವಾಗಿ ಚಿಂತನೆ ನಡೆಸುತ್ತಿದೆ ಎಂದು, ಗೃಹ ಸಚಿವ ಡಾಕ್ಟರ್ ಜಿ. ಪರಮೇಶ್ವರ, ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಮೊಬೈಲ್ ಬಳಕೆಯಿಂದ ಮಕ್ಕಳ ವಿದ್ಯಾಭ್ಯಾಸದ ಮೇಲೆ, ನಕಾರಾತ್ಮಕ ಪರಿಣಾಮ ಬೀರುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ. ಈ ಹಿನ್ನೆಲೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಚರ್ಚಿಸಲಾಗುತ್ತಿದೆ ಎಂದರು.

<><><>

**ವಿಜಯನಗರ ಜಿಲ್ಲೆ, ಹಂಪಿ ಕನ್ನಡ ವಿಶ್ವವಿದ್ಯಾಲಯ** ಘಟಿಕೋತ್ಸವ, 34 ನೇ ನುಡಿ ಹಬ್ಬ, ಇಂದು ಸಂಜೆ 5.30 ಕ್ಕೆ, ವಿಶ್ವವಿದ್ಯಾಲಯದ ನವರಂಗ ಬಯಲು ರಂಗಮಂದಿರದಲ್ಲಿ ಜರುಗಲಿದೆ. ಹಂಪಿ ವಿಶ್ವವಿದ್ಯಾಲಯ ಕೊಡ ಮಾಡುವ ಪ್ರತಿಷ್ಠಿತ ನಾಡೋಜ ಗೌರವಕ್ಕೆ, ಕನ್ನಡದ ಪ್ರಸಿದ್ಧ ಬರಹಗಾರ ಹಾಗೂ ಮಾರ್ಕ್ಸ್ ವಾದಿ ಚಿಂತಕ ಡಾಕ್ಟರ್ ಜಿ. ರಾಮಕೃಷ್ಣ, ಖ್ಯಾತ ಸಂಶೋಧಕ ಡಾಕ್ಟರ್ ಸಿ. ಮಹಾದೇವಪ್ಪ ಹಾಗೂ ಮಾಹಿತಿ ಹಕ್ಕು ಆಯೋಗದ ಆಯುಕ್ತರಾಗಿ ಸೇವೆ ಸಲ್ಲಿಸಿದ್ದ ಡಾಕ್ಟರ ಎಚ್. ಸಿ ಸತ್ಯನ್ ಅವರು ಭಾಜನರಾಗಿದ್ದಾರೆ ವಿಶ್ವವಿದ್ಯಾಲಯದಲ್ಲಿ ಸುದ್ದಿಗೋಷ್ಠಿ ನಡೆಸಿ, ಮಾಹಿತಿ ನೀಡಿದ ಕುಲಪತಿ ಡಿ. ವಿ ಪರಮ ಶಿವಮೂರ್ತಿ, ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ನಾಡೋಜ ಪ್ರಶಸ್ತಿ ಸೇರಿದಂತೆ, 107 ಜನರಿಗೆ ಪಿ.ಎಚ್.ಡಿ ಪದವಿ ಪ್ರದಾನ ಮಾಡಿ, ಗೌರವಿಸಲಿದ್ದಾರೆ. ಹಿರಿಯ ಚಿಂತಕ ಡಾಕ್ಟರ್ ಕೆ. ಮರುಳಸಿದ್ದಪ್ಪ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದು ಅವರು ತಿಳಿಸಿದ್ದಾರೆ. ನಾಡೋಜಾ ಪ್ರಶಸ್ತಿಗೆ ಭಾಜನರಾದ, ಬೆಂಗಳೂರಿನ ಹೆಚ್.ಸಿ ಸತ್ಯನ್ ಅವರು ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಹೆಚ್.ಸಿ ಸತ್ಯನ್ 41 ಸೆಕೆಂದುಗಳು**

<><><>

**ಕಲಬುರಗಿಯ, ಗುಲಬರ್ಗಾ ವಿಶ್ವವಿದ್ಯಾಲಯದ, 43ನೇ ವಾರ್ಷಿಕ** ಘಟಿಕೋತ್ಸವ ಇಂದು, ವಿಶ್ವವಿದ್ಯಾಲಯದ ಜ್ಞಾನಗಂಗಾ ಆವರಣದಲ್ಲಿರುವ, ಡಾಕ್ಟರ ಬಿ. ಆರ್. ಅಂಬೇಡ್ಕರ್ ಭವನದಲ್ಲಿ ಬೆಳಗ್ಗೆ 11 ಗಂಟೆಗೆ ಜರುಗಲಿದೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಐತಿಹಾಸಿಕ ಪರಂಪರೆ ಹಾಗೂ ಸಾಂಸ್ಕೃತಿಕ** ವೈಭವದಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ, ಮೈಸೂರು ನಗರದ ಸ್ವಚ್ಛತೆಯನ್ನು, ಸ್ವಚ್ಛ ಭಾರತ ಪರಿಕಲ್ಪನೆಯಡಿ, ಮತ್ತ ್ಟ ಉತ್ತಮಪಡಿಸುವ ಉದ್ದೇಶದಿಂದ ಮೈಸೂರು ಮಹಾನಗರ ಪಾಲಿಕೆ, ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಸೇರಿದಂತೆ, ಆರು ಜನ ಸಾಧಕರನ್ನು 'ಸ್ವಚ್ಛತಾ ರಾಯಬಾರಿಗಳನ್ನಾಗಿ' ನೇಮಕ ಮಾಡಿದೆ.

<><><>

**ಹುಬ್ಬಳ್ಳಿ, ರಾಜನಗರದ ಕರ್ನಾಟಕ ರಾಜ್ಯ ಕ್ರಿಕೆಟ್** ಅಸೋಸಿಯೇಶನ್ ಮೈದಾನದಲ್ಲಿ ಇಂದಿನಿಂದ, ದೇವದತ್ತ ಪಡಿಕ್ಕಲ್ ನೇತೃತ್ವದ ಕರ್ನಾಟಕ ಹಾಗೂ ಪಾರಸ್ ಡೋಗ್ರಾ ನಾಯಕತ್ವದ– ಜಮ್ಮು ಕಾಶ್ಮೀರ ಕ್ರಿಕೆಟ್ ತಂಡಗಳ ಮಧ್ಯೆ ರಣಜಿ ಟ್ರೋಫಿ ಫೈನಲ್ ಪಂದ್ಯ ನಡೆಯಲಿದೆ. ಪಂದ್ಯವು ಬೆಳಗ್ಗೆ 9.30 ರಿಂದ ಆರಂಭಗೊಳ್ಳಲಿದೆ. ಮೊತ್ತಮೊದಲ ಬಾರಿಗೆ ರಣಜಿ ಟ್ರೋಫಿ ಫೈನಲ್ ಪಂದ್ಯಕ್ಕೆ ಹುಬ್ಬಳ್ಳಿ ಆತಿಥ್ಯ ವಹಿಸುತ್ತಿರುವುದು ಹೆಮ್ಮೆ ಹಾಗೂ ಸಂತಸದ ವಿಷಯವಾಗಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ. ಫೈನಲ್ ಪಂದ್ಯದಲ್ಲಿ ಪಾಲ್ಗೊಳ್ಳುತ್ತಿರುವ ಎರಡೂ ತಂಡಗಳಿಗೆ ಸಚಿವರು ತಮ್ಮ ಎಕ್ಸ್ ಖಾತೆ ಮೂಲಕ ಶುಭಾಶಯಗಳನ್ನು ಕೋರಿದ್ದಾರೆ. ಹುಬ್ಬಳ್ಳಿಯಲ್ಲಿ ಆಯೋಜಿತ, ರಣಜಿ ಕ್ರಿಕೆಟ್ ಪಂದ್ಯಾವಳಿಯ ವಿಶೇಷತೆ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬೆಂಗಳೂರಿನ ಹಿರಿಯ ಕ್ರೀಡಾ ವರದಿಗಾರ ಹಾಗೂ ಪತ್ರಕರ್ತ, ಗಿರೀಶ ದೊಡ್ಡಮನಿ. .

<><><>

**ಗಿರೀಶ ದೊಡ್ಡಮನಿ 62 ಸೆಕೆಂದುಗಳು**

<><><>

**ಕಲಬುರಗಿ ನಗರದ ಚಂದ್ರಶೇಖರ ಪಾಟೀಲ್** ಜಿಲ್ಲಾ ಕ್ರೀಡಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ಟೆನ್ನಿಸ್ ಐ.ಟಿ.ಎಫ್– 2026 ಪಂದ್ಯಾವಳಿಯನ್ನು ಮಾರ್ಚ್ 1 ರಿಂದ 8 ರವರೆಗೆ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

<><><>

**ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,** ಮುಂಬರುವ ಶೈಕ್ಷಣಿಕ ವ ್ಷದಲ್ಲಿ ಜರ್ಮನಿಯ ಡಾರ್ಟ್ಮುಂಡ್ ಅನ್ವಯಿಕ ವಿಜ್ಞಾನ ಮತ್ತು ಕಲಾ ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಒಪ್ಪಂದ ಮಾಡಿಕೊಳ್ಳಲು ನಿರ್ಧರಿಸಿದೆ. ಡಾರ್ಟ್ಮುಂಡ್ ಅನ್ವಯಿಕ ವಿಜ್ಞಾನ ಮತ್ತು ಕಲಾ ವಿಶ್ವವಿದ್ಯಾಲಯದ ನಿಯೋಗ ಬೆಂಗಳೂರು, ನಾಗರಬಾವಿಯಲ್ಲಿರುವ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ–ವಿಟಿಯು ಪ್ರಾದೇಶಿಕ ಕಚೇರಿಗೆ ಭೇಟಿ ನೀಡಿ, ಕುಲಪತಿ ಡಾಕ್ಟರ ಎಸ್.ವಿದ್ಯಾಶಂಕರ್ ಹಾಗೂ ಸಂಸ್ಥೆಯ ಗಣ್ಯರೊಂದಿಗೆ ಚರ್ಚೆ ನಡೆಸಿತು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ದೇಶದ ಜೈವಿಕ ತಂತ್ರಜ್ಞಾನ ಆರ್ಥಿಕತೆಗೆ** ರಾಜ್ಯದ ಶೇಕಡ 21 ರಷ್ಟು ಕೊಡುಗೆ; ಕರ್ನಾಟಕ ಜೈವಿಕ ಆರ್ಥಿಕತೆ ವರದಿ.

**ಮಿಶನ್ ಪ್ರಕೃತಿ; ರಾಜ್ಯದ** 10 ಶಾಲೆಗಳಿಗೆ 'ಅತ್ಯುತ್ತಮ ಶಾಲೆ' ಪರಿಸರ ಸಂರಕ್ಷಣೆ ಪ್ರಶಸ್ತಿ

**ಇಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ** 34 ನೇ ಘಟಿಕೋತ್ಸವ: ಮೂವರು ಗಣ್ಯರಿಗೆ ನಾಡೋಜಾ ಪ್ರಶಸ್ತಿಯ ಗೌರವ

**ರಣಜಿ ಟ್ರೋಫಿ ಕ್ರಿಕೆಟ್ : ಇಂದಿನಿಂದ** ಹುಬ್ಬಳ್ಳಿಯ ಕೆ.ಎಸ್.ಸಿ.ಎ ಮೈದಾನದಲ್ಲಿ, ಕರ್ನಾಟಕ ಹಾಗೂ ಜಮ್ಮು–ಕಾಶ್ಮೀರ ತಂಡಗಳ ನಡುವೆ ಅಂತಿಮ ಪಂದ್ಯ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>